ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 78-82
©*IIMRD*, Mysuru

IIMRD JOURNALS
www.iimrd.com

# ವಿಕಲಚೇತನರ ಸಬಲೀಕರಣದಲ್ಲಿ ಸರ್ಕಾರದ ಪಾತ್ರ

**ಡಾ. ರಾಜಶ್ರೀ ಎಸ್. ಮಾರನೂರ**[*]

[*] ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಇಂಡಿ, ವಿಜಯಪುರ ಜಿಲ್ಲೆ.

**ಸಾರಾಂಶ (Abstract)**

*ಪ್ರತಿವರ್ಷವೂ ಡಿಸೆಂಬರ್ 3 ರಂದು ವಿಶ್ವ ಅಂಗವಿಕಲರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಅಂಗವಿಕಲರ ಯೋಗಕ್ಷೇಮದ ಬಗ್ಗೆ ವಿಶ್ವದ ಜನತೆಯ ಗಮನ ಸೆಳೆಯುವ ಸದುದ್ದೇಶದಿಂದ ಈ ದಿನವನ್ನು ಆಚರಣೆ ಮಾಡಲಾಗುತ್ತಿದೆ. ಇದು ಜಾಗತಿಕವಾಗಿರುವ ವಿಕಲಚೇತನರಿಗೆ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಮಾನತೆ ಹಾಗೂ ಸಮನ್ವಯತೆ ತರುವುದು, ಆ ಮೂಲಕ "ಮನುಷ್ಯ ಕುಲಂ ತಾನೊಂದೆ ವಲಂ" ಎಂಬ ಕವಿವಾಣಿಯಂತೆ ಕಂಗೊಳಿಸುವಂತದ್ದು. ಪ್ರಸ್ತುತ ಲೇಖನದಲ್ಲಿ ವಿಕಲಚೇತನರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು (Keywords)*:** ಅಂಗವಿಕಲ, ರಾಜ್ಯನೀತಿ, ವಿಕಲಚೇತನ, ಸಮಾಜ, ಸಾಮಾಜಿಕ ಭದ್ರತೆ, ಸರ್ಕಾರದ ಯೋಜನೆಗಳು.

**ಪೀಠಿಕೆ**

ಅಂಗವಿಕಲತೆ ಜೀವಿಗಳನ್ನು ಅನಾದಿಕಾಲದಿಂದಲೂ ಕಾಡುತ್ತಾ ಬಂದಿರುವ ಒಂದು ಪ್ರಮುಖ ಜ್ವಲಂತ ಸಮಸ್ಯೆಯಾಗಿದೆ. ಅಂಗವಿಕಲರು ಎಂದರೆ ಯಾರು ಎಂಬ ಪ್ರಶ್ನೆಗೆ ನಿಖರವಾಗಿ ವ್ಯಾಖ್ಯಾನಿಸುವುದು ಕಷ್ಟ. ಸಾಮಾನ್ಯವಾಗಿ ಯಾರು ಸಂಪೂರ್ಣವಾಗಿ ಸಶಕ್ತರಲ್ಲವೋ, ದೈಹಿಕ ಇಲ್ಲವೆ ಮಾನಸಿಕ ಅಶಕ್ತತೆಯಿಂದ, ಇಲ್ಲವೇ ಕೊರತೆಯಿಂದ ಬಳಲುತ್ತಿರುವರೋ, ಅಂತಹವರನ್ನು ಅಂಗವಿಕಲರು ಇಲ್ಲವೇ ಮನೋವಿಕಲರು ಎಂಬುದಾಗಿ ಕರೆಯುತ್ತೇವೆ. ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ಅಥವಾ ಇಂಟರನ್ಯಾಷನಲ್ ಲೇಬರ್ ಆರ್ಗನೈಜೇಷನ್ ಪ್ರಕಾರ "ಯಾವುದೇ ವ್ಯಕ್ತಿಯು ತನ್ನ ಅಂಗವಿಕಲತೆಯಿಂದ ಉದ್ಯೋಗಕ್ಕೆ ಸೇರಲು ಅನರ್ಹನಾಗಿದ್ದರೆ ಇಲ್ಲವೇ ಕೊರತೆ ಇರುವವನಾಗಿ  ಕಂಡುಬರುತ್ತಿದ್ದರೆ ಅವನನ್ನು ಅಂಗವಿಕಲ ಎಂಬುದಾಗಿ ಪರಿಗಾಣಿಸಲಾಗುತ್ತದೆ.

ಸಾಮಾನ್ಯವಾಗಿ ಅಂಗವಿಕಲ ವ್ಯಕ್ತಿಗೆ ನಿರ್ದಿಷ್ಟ ಅಂಗ ಮಾತ್ರ ಊನವಾಗಿದ್ದು ಉಳಿದೆಲ್ಲ ಅಂಗಗಳು ಸಶಕ್ತವಾಗಿರುತ್ತವೆ. ಅಂತೆಯೇ ಆ ವ್ಯಕ್ತಿಯು ತನಗೆ ಪೂರ್ಣವಾಗಿರುವ ಅಂಗದ ಕಾರ್ಯವನ್ನು ಬಿಟ್ಟು

ಉಳಿದ ಎಲ್ಲಾ ಅಂಗಗಳ ಕಾರ್ಯಗಳನ್ನು ಇತರ ಸಾಮಾನ್ಯ ವ್ಯಕ್ತಿಗಳು ನಿರ್ವಹಿಸುವಂತೆ ನಿರ್ವಹಿಸಬಲ್ಲವನಾಗಿರುತ್ತಾನೆ. ಉದಾಹರಣೆಗೆ ಅಂಧವ್ಯಕ್ತಿ ಅಥವಾ ಕುರುಡನು ಕಣ್ಣಿನ ದೃಷ್ಟಿ ಅವಶ್ಯಕವಾದ ಕೆಲಸವನ್ನು ಬಿಟ್ಟು ಉಳಿದ ಎಲ್ಲಾ ಕಾರ್ಯಗಳನ್ನು ಮಾಡಬಲ್ಲವನಾಗಿರುತ್ತಾನೆ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಗೆ ಆತನ ಯಾವುದೋ ಒಂದು ಅಂಗ ಇಲ್ಲವೇ ಕೆಲವು ಅಂಗಗಳು ಸುಸ್ಥಿತಿಯಲ್ಲಿ ಇಲ್ಲದಿದ್ದರೆ ಅದನ್ನು ಅಂಗವಿಕಲತೆ ಎಂಬುದಾಗಿ ಕರೆಯುತ್ತೇವೆ. ಯಾವುದೇ ವ್ಯಕ್ತಿ ಮಾನಸಿಕವಾಗಿ ಸಾಮಾನ್ಯ ಸ್ಥಿತಿಯನ್ನು ಹೊಂದಿರದಿದ್ದರೆ ಅದನ್ನು ಮನೋವಿಕಲತೆ ಎಂದು ಕರೆಯುತ್ತಾರೆ .

ವಿಕಲಾಂಗ ವ್ಯಕ್ತಿಯು ತನ್ನ ಕ್ರಿಯಾ ಸಾಮರ್ಥ್ಯವನ್ನು ಮತ್ತು ಚಟುವಟಿಕೆಗಳನ್ನು ನಡೆಸುವ ಕೌಶಲ್ಯಗಳನ್ನು ಕಾಲಕ್ರಮೇಣ ಕಳೆದುಕೊಳ್ಳುತ್ತಾ ಇರುತ್ತಾನೆ. ಆರ್‌ಪಿ.ಡಬ್ಲ್ಯೂಡಿ 2016ರ ಪ್ರಕಾರ ಸರಕಾರ ಅಂಗವೈಕಲ್ಯಗಳನ್ನು 21 ವಿಧವಾಗಿ ವರ್ಗೀಕರಿಸಿದೆ. ಅವುಗಳಲ್ಲಿ ಅತಿಮುಖ್ಯವಾಗಿ ಶಾರೀರಿಕ ವೈಕಲ್ಯ, ಮಾನಸಿಕ ವೈಕಲ್ಯ ಮತ್ತು ಪಂಚೇಂದ್ರಿಯ ವೈಕಲ್ಯ ಎಂಬುದಾಗಿ ಮೂರು ವಿಧಗಳನ್ನಾಗಿ ವಿಭಾಗಿಸಲಾಗಿದೆ.

ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ 2011 ರ ಜನಗಣತಿ ವರದಿ ಪ್ರಕಾರ 121 ಕೋಟಿ ಜನರಲ್ಲಿ 2.68 ಕೋಟಿ ಜನರು ಅಂಗವಿಕಲರಿದ್ದಾರೆ. ಇದರಲ್ಲಿ 1.5 ಕೋಟಿ ಪುರುಷರು ಮತ್ತು 1.18 ಸ್ತ್ರೀಯರು. ಅಂಗವಿಕಲರಲ್ಲಿ ಶೇ.69 ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಚಿಕಿತ್ಸಾ ಕೇಂದ್ರಗಳು ತುಂಬಾ ಕಡಿಮೆ ಇರುತ್ತವೆ. ಪ್ರಪಂಚದ ಪ್ರತಿಯೊಂದು ರಾಷ್ಟ್ರಗಳಲ್ಲಿಯೂ ಅಂಗವಿಕಲರಿದ್ದಾರೆ. ಆದರೆ ಅವರ ಸಂಖ್ಯೆ ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿದೆ. ಮುಂದುವರೆದ ರಾಷ್ಟ್ರಗಳಲ್ಲಿ ಅವರ ಸಂಖ್ಯೆ ಕಡಿಮೆ ಇದ್ದರೆ, ಹಿಂದುಳಿದ ರಾಷ್ಟ್ರಗಳಲ್ಲಿ ಅವರ ಸಂಖ್ಯೆ ಬಹಳಷ್ಟಿರುವುದು ಕಂಡುಬರುತ್ತದೆ. ಒಂದು ದೃಷ್ಟಿಯಲ್ಲಿ ರಾಷ್ಟ್ರದ ಹಿಂದುಳಿದಿರುವಿಕೆಯೂ ಸಹ ಆ ರಾಷ್ಟ್ರದಲ್ಲಿ ಅಂಗವಿಕಲತೆ ಅಧಿಕ ಪ್ರಮಾಣದಲ್ಲಿ ಕಂಡು ಬರಲು ಕಾರಣವಾಗಿರುತ್ತದೆ. ವೈದ್ಯಕೀಯ ವಿಜ್ಞಾನ ಬಹಳವಾಗಿ ಮುಂದುವರಿದಿರುವ ಈ ದಿನಗಳಲ್ಲಿ ಅಂಗವಿಕಲತೆ ಒಂದಿಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದೆ.

ಅಂಗವಿಕಲತೆಗೆ ಮೂಲಕಾರಣಗಳನ್ನು ನೋಡಲಾಗಿ ಸಾಂಕ್ರಾಮಿಕವಾಗಿ ಹಬ್ಬುವ ರೋಗಗಳು, ನರ ಸಂಬಂಧದ ಪರಿಣಾಮಗಳಿರುವ ಮಂಪ್ಸ್, ಪೋಲಿಯೋ ಇತ್ಯಾದಿ ರೋಗಗಳಿಂದ ಅಂಗವೈಕಲ್ಯ ಉಂಟಾಗಲು ಸಾಧ್ಯವಿದೆ. ಮಧುಮೇಹ, ಕೀಲುಊತ ರೋಗ ಮತ್ತು ಅರ್ಬುದ ಕೂಡ ಅಂಗವೈಕಲ್ಯವನ್ನು ಉಂಟು ಮಾಡಲು ಸಾಧ್ಯವಿದೆ. ರಸ್ತೆ ಅಪಘಾತಗಳು, ವೃತ್ತಿ ಸಂಬಂಧಿ ಅಪಘಾತ, ಗಾಯಗಳು, ಹಿಂಸಾಚಾರ, ಗಲಾಟೆ, ಸ್ಫೋಟಕಗಳು ಅತಿ ಹೆಚ್ಚು ಅಂಗವೈಕಲ್ಯಕ್ಕೆ ಕಾರಣವಾಗುತ್ತಿವೆ. ಕಡಿಮೆ ಸಂಪಾದನೆ ಇರುವವರು, ನಿರುದ್ಯೋಗಿಗಳು ಅಂಗವೈಕಲ್ಯಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಪ್ರಾಯ ಹೆಚ್ಚಿದಂತೆ ಅಂಗವೈಕಲ್ಯದ ಅಪಾಯ ಹೆಚ್ಚುತ್ತದೆ.

**ಅಂಗವಿಕಲರ ರಾಜ್ಯ ನೀತಿ**

ಸರ್ಕಾರವು ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಉದ್ದೇಶಗಳನ್ನು ಜಾರಿಗೆ ತರುವ ಉದ್ದೇಶದಿಂದ ಕರ್ನಾಟಕ ರಾಜ್ಯ ಅಂಗವಿಕಲತೆಯ ಕಾರ್ಯನೀತಿಯನ್ನು ಜಾರಿಗೊಳಿಸಲು ಸರ್ಕಾರ ಮಂಜೂತಿ ನೀಡಲಾಗಿದೆ.

ಈ ಅಧಿನಿಯಮದಂತೆ ಮುಖ್ಯವಾಹಿನಿ ಶಾಲೆಗಳಲ್ಲಿ ಅಂಗವಿಕಲ ಮಕ್ಕಳನ್ನು ದಾಖಲಿಸಿ ಅವರ ಶಿಕ್ಷಣವನ್ನು ಉತ್ತೇಜಿಸುವುದು, ಅಂಗವಿಕಲ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಡುವುದು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಅಧಿನಿಯಮದ ಪ್ರಮುಖ ಉದ್ದೇಶವಾಗಿದೆ. ಇವುಗಳಲ್ಲದೆ ಅಂಗವಿಕಲರ ರಾಜ್ಯ ನೀತಿಯನ್ವಯ ಎಲ್ಲಾ ಇಲಾಖೆಗಳು ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಪಂಚವಾರ್ಷಿಕ ಮುನ್ನೋಟ ಯೋಜನೆ ಸಿದ್ಧಪಡಿಸುವುದರ ಜೊತೆಗೆ ಅನುಚ್ಛೇದ 41ರ ನಿರ್ದೇಶಕ ತತ್ವಗಳು, ಇನ್ನಿತರ ನೀತಿಗಳನ್ವಯ ಜೊತೆಗೆ ಅಂಗವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಜ್ಯ ಪರಿಣಾಮಕಾರಿಯಾದ ಯೋಜನೆಯನ್ನು ರೂಪಿಸಿಬೇಕಿದೆ.

ಕರ್ನಾಟಕ ಅಂದಾಜು ಶೇ. 5 ರಿಂದ 6 ರಷ್ಟ ಅಂಗವಿಕಲರಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸಮನ್ವಯಗೊಳಿಸಲು ಪುನರ್ವಸತಿ, ಕ್ಷಣ, ಆರ್ಥಿಕ ಅವಕಾಶ ಹಾಗೂ ಇತರ ಅವಲಂಬನಾ ಸೇವೆಗಳನ್ನು ರಾಜ್ಯವು ಕಲ್ಪಿಸಬೇಕಾಗಿದೆ. ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೋಡಲ್ ಇಲಾಖೆಯಾದ ರಾಜ್ಯ ಅಂಗವಿಕಲರ ಆಯುಕ್ತರ ಕಛೇರಿಯು ಅಂಗವಿಕಲರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಕ್ರಮ ತೆಗೆದುಕೊಳ್ಳುವುದದ ಜೊತೆಗೆ ಅಂಗವಿಕಲರಿಗಾಗಿ ಇರುವ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಸಮನ್ವಯಗೊಳಿಸಿ ಮೇಲ್ವಿಚಾರಣೆ ಮಾಡಬೇಕಿದೆ. ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಪಟ್ಟ ಶಾಸನಗಳ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳುವುದು ಈ ರಾಜ್ಯ ಕಾರ್ಯನೀತಿಯ ಉದೇಶವಾಗಿದ್ದು, ಅಂಗವಿಕಲತೆಯನ್ನು ಪ್ರಾರಂಭದಲ್ಲೇ ಪತ್ತೆಹಚ್ಚಿ ಅಂಗವಿಕಲತೆ ಬಾರದಂತೆ ನೋಡಿಕೊಳ್ಳುವುದು ಈ ಅಧಿನಿಯಮದ ಉದ್ದೇಶವಾಗಿರುತ್ತದೆ.

ವಿಕಲಚೇತನರಿಗೆ ಇರುವ ಸೌಲಭ್ಯಗಳು

- ರೀಹ್ಯಾಬಿಟೇಶನ್ ಕೌನ್ಸಿಲ್ ಆಫ್ ಇಂಡಿಯಾ ಅಧಿನಿಯಮ 1992 ಭಾರತ ಸರಕಾರದ ಸ್ವಾಮ್ಯಕ್ಕೊಳಪಟ್ಟಿದ್ದು, ವಿಕಲಚೇತನರಿಗೆ ಪುನರ್ವಸತಿ ಕ್ಷೇತ್ರದಲ್ಲಿ ವಿವಿಧ ಯೋಜನೆ ಮತ್ತು ತರಬೇತಿ ಕಾರ್ಯನೀತಿಗಳನ್ದನು ಕ್ರಮಬದ್ಧಗೊಳಿಸುವ ಗುರುತರ ಜವಾಬ್ದಾರಿ ಹೊಂದಿರುವ ಸಂಸ್ಥೆಯಾಗಿದೆ.
- ಗ್ರಾಮೀಣ ಪ್ರದೇಶದಲ್ಲಿ 12,000/– ನಗರದಲ್ಲಿ 17,000/– ಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ಕುಟುಂಬದ ವ್ಯಕ್ತಿಗೆ ಶೇ.40 ರಿಂದ ಶೇ.74 ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆಯಾನ 1,400/– ಭತ್ಯೆ ನೀಡಲಾಗುತ್ತಿದೆ.
- ಒಂದನೇ ತರಗತಿಯಿಂದ ವಿಶ್ವವಿದ್ಯಾಲಯ ಮಟ್ಟದಲ್ಲಿ ಓದುತ್ತಿರುವ ಅರ್ಹ ವಿಕಲಚೇತನರಿಗೆ ಬಸ್ ಪಾಸನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ.
- ಎಸ್‌ಎಸ್‌ಎಲ್‌ಸಿ ನಂತರ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ವಿಕಲಚೇತನ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕ ಮರುಪಾವತಿಸುವ ಯೋಜನೆ ಸೆಪ್ಟೆಂಬರ್ 3, 2013 ರಿಂದ ಜಾರಿಗೆ ಬಂದಿದೆ.

- ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದು.
- ಅಂಧ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಹೊಂದಲು ಅನುಕೂಲವಾಗುವಂತೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆಯನ್ನು 2014–15 ನೇ ಸಾಲಿನಿಂದ ಜಾರಿಗೆ ತರಲಾಗಿದೆ.
- ಅಂಗವಿಕಲರ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾಗಿರುವ ತ್ರಿಚಕ್ರ ವಾಹನಗಳು, ಶ್ರವಣ ಸಾಧನಗಳು, ಕೃತಕ ಅಂಗಾಂಗಗಳು, ಬ್ರೈಟ್ ಗಡಿಯಾರಗಳು, ದೃಷ್ಟಿ ದೋಷವುಳ್ಳವರು ಉಪಯೋಗಿಸುವ ಬಿಳಿ ಕೋಲುಗಳನ್ನು ಉಚಿತವಾಗಿ ವಿತರಿಸುವುದು. ಯಂತ್ರಚಾಲಿತ– ದ್ವಿಚಕ್ರವಾಹನ ಖರೀದಿಸಲು ಶೇಕಡ 50 ಧನಸಹಾಯ ನೀಡುವುದು. 2016–17 ನೇ ಸಾಲಿನಲ್ಲಿ ಘಟಕ ವೆಚ್ಚ ರೂ.10,000 ರಿಂದ ರೂ.15,000 ಕ್ಕೆ ಹೆಚ್ಚಿಸಿದೆ.
- ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ್ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಯ ಅಡಿಯಲ್ಲಿ 15,000 ರೂಪಾಯಿ ಮೌಲ್ಯದ ಪೆಟ್ಟಿಗೆ ಅಂಗಡಿಯನ್ನು ತೆರೆಯಲು 20,000 ರೂಪಾಯಿ ಬಡ್ಡಿ ರಹಿತ ಸಾಲ ಮಂಜೂರು ಮಾಡಿ 40 ಕಂತಿನಲ್ಲಿ ಮರುಪಾವತಿಸುವುದು.
- ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳ ಪಾಲನೆಗೆ ಶಿಶುಪಾಲನೆಗೆ ಶಿಶುಪಾಲನಾ ಭತ್ಯೆ ಕನಿಷ್ಠ ಎರಡು ಮಕ್ಕಳಿಗೆ ಎರಡು ವರ್ಷದ ಅವಧಿಗೆ ರೂ. 2,000 ಧನಸಹಾಯ ನೀಡಲಾಗುತ್ತದೆ.
- ಗುರುತಿನ ಚೀಟಿ, ನಿರುದ್ಯೋಗ ಭತ್ಯೆ, ಸ್ಪರ್ಧಾ ಚೇತನ ಯೋಜನೆ, ಅರವಿನ ಸಿಂಚನ ಯೋಜನೆ, ಸಮಾಜಸೇವಾ ಸಂಕಿರಣ, ಮಂದಮತಿ ಮಹಿಳೆಯ ಅನುಪಾಲನೆಗಾಗಿ ವಿಶೇಷ ಶಾಲೆಗಳಿವೆ.

ಹೀಗೆ ಎಲ್ಲ ಮಕ್ಕಳನ್ನು, ಎಲ್ಲ ವಿಕಲಚೇತನರನ್ನು ಸಮನ್ವಯಗೊಳಿಸಲು ಹಲವಾರು ರೀತಿಯ ಕಾಯ್ದೆ ಕಾನೂನು ಮತ್ತು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಆದರೆ ಅಂಗವಿಕಲರ ಸೌಲಭ್ಯಗಳ ಮತ್ತು ಅಗತ್ಯತೆಗಳ ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ.

ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸುವ ಪ್ರಕಾರ, ವಿಶ್ವದಾದ್ಯಂತ 20 ಕೋಟಿ ಜನರು ಕನ್ನಡಕ ಪಡೆಯಲು ಅಸಮರ್ಥರಾಗಿದ್ದಾರೆ. 7 ಕೋಟಿ ಜನರಲ್ಲಿ ಕೇವಲ ಶೇಕಡಾ 15 ರಷ್ಟು ಅಂಗವಿಕಲರಿಗೆ ಗಾಲಿಕುರ್ಚಿ ಲಭ್ಯವಾಗಿರುತ್ತದೆ. ಜಾಗತಿಕವಾಗಿ 36 ಕೋಟಿ ಜನರು ಮಾಧ್ಯಮಗಳಿಂದಾಗಿ ತಿವ್ರವಾದ ಕುಂಠಿತ ಶ್ರವಣಶಕ್ತಿ ಹೊಂದಿದ್ದಾರೆ. ಇವರಲ್ಲಿ ಕೇವಲ ಶೇ.10 ರಷ್ಟು ಜನರಿಗೆ ಶ್ರವಣ ಸಾಧನಗಳು ಲಭ್ಯವಾಗಿರುತ್ತವೆ. ಅಂಗವಿಕಲರಲ್ಲಿ ಅರ್ಧದಷ್ಟು ಜನರು ಆರೋಗ್ಯ ಸೇವೆಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ವಿಶ್ವದಲ್ಲಿರುವ ಅಂಗವಿಕಲರಲ್ಲಿ ಅರ್ಧದಷ್ಟು ಜನರು ಆರೋಗ್ಯಸೇವೆ ವೆಚ್ಚವನ್ನು ಭರಿಸಲು ಅಸಮರ್ಥರಾಗಿರುತ್ತಾರೆ.

ಅಂಗವಿಕಲರು ಹೆಚ್ಚು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಏಕೆಂದರೆ ಸರಕಾರದ ಆರೋಗ್ಯ ಸೇವೆ ಮತ್ತು ಇತರ ಸೇವೆಗಳನ್ನು ಪಡೆಯಲು ಅವರು ಅಸಮರ್ಥರಾಗಿರುತ್ತಾರೆ. ಅಂಗವೈಕಲ್ಯವನ್ನು ಈಗ ಮಾನವ ಹಕ್ಕುಗಳ ಸಮಸ್ಯೆ ಎಂದು ವ್ಯಾಖ್ಯಾನಿಸಿ ಅರ್ಥ ಮಾಡಿಕೊಳ್ಳಲಾಗಿದೆ. ಸರಕಾರಗಳು, ಸರಕಾರೇತರ ಸಂಸ್ಥೆಗಳು, ವೃತ್ತಿಪರರು ಮತ್ತು ಅಂಗವಿಕಲರು ಮತ್ತು ಅವರ ಕುಟುಂಬಗಳು ಒಟ್ಟಾಗಿ ಕೆಲಸ ಮಾಡಿದರೆ ಅಡೆತಡೆಗಳನ್ನು ನಿವಾರಿಸಬಹುದು. ಜೊತೆಗೆ ಅಂಗವಿಕಲರಿಗೆ ಪುನರ್ವಸತಿ ಕಲ್ಪಿಸುವುದು ವಿಕಲಚೇತನರ ಹಕ್ಕುಗಳ ಕಾಯ್ದೆ 2016 ರ ಪರಿಭಾಷೆಯ ಅರ್ಥದಲ್ಲಿ ಸಮರ್ಪಕವಾಗಿ ಜಾರಿಗೊಳಿಸುವುದು ಸರ್ಕಾರ ಹಾಗೂ ಸಮಾಜ ಇಲಾಖೆಗಳ ಆದ್ಯ ಕರ್ತವ್ಯವಾಗಿದೆ ಹಾಗೂ ತಿಳುವಳಿಕೆ ಹೊಂದುವುದು ಅವಶ್ಯವಾಗಿದೆ.

**ಉಪಸಂಹಾರ**

ಒಟ್ಟಾರೆ ಅಂಗವಿಕಲರ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿರುವುದು ತುಂಬಾ ಅಗತ್ಯವಾಗಿದೆ. ಅಲ್ಲದೆ ಅಂಗವಿಕಲರು ಸರ್ಕಾರದಿಂದ ಸಹಾಯ ನಿರೀಕ್ಷಿಸುವುದರ ಜೊತೆಗೆ ಹೆಚ್ಚಿನ ವಿಶ್ವಾಸದಿಂದ ಇತರರಿಗೆ ಸರಿಸಮಾನವಾಗಿ ಬಾಳುವ ದೃಢ ಸಂಕಲ್ಪ ಮಾಡಿ ಕಾರ್ಯೋನ್ಮುಖರಾಗಬೇಕಾಗುವಂತೆ ಅವರನ್ನು ಮಾನಸಿಕವಾಗಿ ಸದೃಢಗೊಳಿಸುವುದು ತುಂಬಾ ಅಗತ್ಯವಾದುದು. ಅಂಗವಿಕಲರು ತಮ್ಮಲ್ಲಿರಬಹುದಾದ ಕೀಳರಿಮೆಯನ್ನು ಕಿತ್ತೊಗೆದು ಬೇರೆಯವರಂತೆ ತಾವೂ ಸುಂದರ ಬದುಕನ್ನು ಬದುಕುವಂತೆ ಸಂಕಲ್ಪ ಮಾಡಿ ಸತತ ಪ್ರಯತ್ನದ ಮೂಲಕ ಸಾಧನೆ ಮಾಡುವುದು ತುಂಬಾ ಅವಶ್ಯಕವಾದುದು. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ ವಿಶ್ವ ಅಂಗವಿಕಲರ ದಿನ ನೀಡುವ ಪ್ರಶಸ್ತಿ ಹಾಗೂ ಬಹುಮಾನಗಳನ್ನು ಅರ್ಹರಿಗೆ ನೀಡುವುದು ಕೂಡ ಅಂಗವಿಕಲರ ಸಬಲೀಕರಣಕ್ಕೆ ಅನುಕೂಲವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಚಿದಂಬರ ಬಂಡಗರ. ನೆಲದ ನಕ್ಷತ್ರಗಳು. ಪ್ರತಿಕ್ಷಾ ಪ್ರಕಾಶನ, ದೇವರನಾವದಗಿ.
- ದೀಪಾ ಮತ್ತು ಶಶಾಂಕ್ ಮೆಹರೋತ್ರ. (2021). ಅಂಗವೈಕಲ್ಯ ಮತ್ತು ಅಂಗವಿಕಲರ ಸಮಸ್ಯೆ. ಉದಯವಾಣಿ ದಿನಪತ್ರಿಕೆ, ಬೆಂಗಳೂರು.
- ಶಂಕರರಾವ್ ಚ. ನ (2015), ಭಾರತೀಯ ಸಾಮಾಜಿಕ ಸಮಸ್ಯೆಗಳು. ಜೈ ಭಾರತ್ ಪ್ರಕಾಶನ, ಮಂಗಳೂರು.
- Ganesh K. S., Das A., Shashi J. S. (2008). Epidemiology of disability in a rural community of Karnataka. *Public Health*, Vol-52, pp125-9.
- Sandeep Singh and R. P. Sharma. (2011). A Study of Social Support in Physically Disabled Students in an Educational Institute of Kanpur. Indian Journal of Community Health, Vol-23 (1).
- WHO. (2000). World Health Organization: International Classification of Functioning, Disability and Health. Geneva: ICF.